**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/07/2025 )**

**ಪಾಟೀ ಸವಾಲು :ಪ್ರತಿವಾದಿ ಪರ ಶ್ರೀ ಎಸ್ ಒ ಎನ್ ವಕೀಲರಿಂದ,**

ನಾನು ಗುತ್ತಿಗೆದಾರನಾಗಿ ಕೆಲಸ ಮಾಡುತ್ತೇನೆ. ನಾನು ಗುತ್ತಿಗೆದಾರನಾಗಿ ಕೆಲಸ ಮಾಡುತ್ತೇನೆಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಹಾಗೂ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲಾ. ವಾದಿಯ ಕಬ್ಜಾ ವಹಿವಾಟು ಸರ್ವೆ ನಂಬರ್ 92 ರಲ್ಲಿ ಇದೆ. ಕೊಂಕಣ ರೈಲ್ವೆ ಸೇತುವೆಯು ಯಾವ ಸರ್ವೆ ನಂಬರಿನಲ್ಲಿದೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಪ್ರಕರಣದಲ್ಲಿರುವ ಹಳ್ಳ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಹರಿಯುತ್ತದೆ. ತಡೆಗೋಡೆಯನ್ನು ಸರ್ವೆ ನಂಬರ್ 92 ರಲ್ಲಿ ಕಟ್ಟಲಾಗಿದೆ . ಹಳ್ಳದ ನೀರು ತಡೆಗೋಡೆಗೆ



ಹೊಡೆಯುತ್ತದೆ. ತಡೆಗೋಡೆಯನ್ನು ವಾದಿ ಸ್ವಂತ ಖರ್ಚಿನಿಂದ ಕಟ್ಟಿದ್ದಾರೆ ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕಾರ್ಪೋರೇಶನ್ ಅವರು ಮಾಡಿದ ಸೇತುವೆ ಹಾಗೂ ತಡೆಗೋಡೆ ಮಧ್ಯದಲ್ಲಿ 15 ಪೀಟ್ ಅಂತರ ಇದೆ. ತಡೆಗೋಡೆಯ ಗುತ್ತಿಗೆಯನ್ನು ನಾನು ತೆಗೆದುಕೊಂಡಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳಪೆ ಕಾಮಗಾರಿಯಿಂದ ತಡೆಗೋಡೆಗೆ ಹಾನಿ ಆಗಿದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಗುತ್ತಿಗೆದಾರರು ತಡೆಗೋಡೆಗೆ ಹಾನಿಯಾದ ಬಗ್ಗೆ ಪರಿಹಾರ ಕೊಡಬೇಕು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.**

**ಪಿ. ಡಬ್ಲ್ಯೂ: 2**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/07/2025 )**

**ಪಾಟೀ ಸವಾಲು :ಪ್ರತಿವಾದಿ ಪರ ಶ್ರೀ ಎಸ್ ಒ ಎನ್ ವಕೀಲರಿಂದ,**

ನಾನು ಪೊಟೋಗ್ರಾಫರ್ ಆಗಿದ್ದೇನೆ. ದಿಃ 16.05.2023 ರಂದು ಕೊಂಕಣ ರೈಲ್ವೆಯ ಪೊಟೋವನ್ನು ತೆಗೆದಿರುತ್ತೇನೆ. ಪೊಟೋ ತೆಗೆಯಲು ನನಗೆ ಶ್ರೀ ಜೆ. ಡಿ. ಎನ್. ವಕೀಲರು ಹೇಳಿರುತ್ತಾರೆ. ಪೊಟೋ ಹಾಗೂ ಸಿಡಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ಸದರಿ ಪ್ರಕರಣದ ಸರ್ವೆ ನಂಬರ್ ಗೊತ್ತಿಲ್ಲ. ತಡೆಗೋಡೆ ಯಾವ ಸರ್ವೆ ನಂಬರಿನಲ್ಲಿದೆ ಎಂದು ನನಗೆ ಮಾಹಿತಿ ಇಲ್ಲ. ಕೊಂಕಣ ರೈಲ್ವೆ ಸೇತುವೆಯು ಯಾವ ಸರ್ವೆ ನಂಬರಿನಲ್ಲಿದೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಪ್ರಕರಣದಲ್ಲಿರುವ ಹಳ್ಳ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಹರಿಯುತ್ತದೆ. ಸದರಿ ಪ್ರಕರಣಕ್ಕೂ ನಾನು ನೀಡಿದ ಪೊಟೋ ಹಾಗೂ ಸಿಡಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ವಾದಿಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ತರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.**